ಓ.ಎಸ್.ನಂಃ 276/2021

ಪಿಡಬ್ಲ್ಯೂ-1

**<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 12.11.2025 ರಂದು ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದಃ</u>**

ಬಿ.ಚೆನ್ನಪ್ಪ ರವರ ತಂದೆ ಹೆಸರು ಬಸಪ್ಪ. ಸುಬ್ಬಮ್ಮ ಚೆನ್ನಪ್ಪರವರನ್ನು ಯಾವಾಗ ಮದುವೆಯಾದರು ಎಂದು ನನಗೆ ಗೊತ್ತಿಲ್ಲ. 1995 ರಲ್ಲಿ ಚೆನ್ನಪ್ಪನ ಹೆಂಡತಿ ಸುಬ್ಬಮ್ಮ ರವರು ಮರಣ ಹೊಂದಿರುತ್ತಾರೆ. ಚೆನ್ನಪ್ಪನ ಮತ್ತೊಬ್ಬ ಹೆಂಡತಿ ಬಸಮ್ಮ ಎಂದು ಹೇಳಿದ್ದೇನೆ. ಬಸಮ್ಮ ಚೆನ್ನಪ್ಪರವರನ್ನು ವಿವಾಹವಾದ ಬಗ್ಗೆ ಗೊತ್ತು. ಆದರೆ ಖುದ್ದಾಗಿ ನನಗೆ ಗೊತ್ತಿಲ್ಲ. ಹೆಗ್ಗಡಹಳ್ಳಿಯ ಚಿಕ್ಕಮಲ್ಲಪ್ಪನ ಮಗ ಸುಬ್ಬಪ್ಪರವರನ್ನು ಚೆನ್ನಪ್ಪ ಮತ್ತು ಸುಬ್ಬಮ್ಮರವರು ದತ್ತು ಪಡೆದಿದ್ದರು ಎಂದರೆ ಸರಿ. ಸದರಿ ದತ್ತಕವನ್ನು ದಿಃ 25.06.1943 ರಲ್ಲಿ ನೋಂದಾಯಿತ ದತ್ತಕ ಪತ್ರದ ಮೂಲಕ ಪಡೆಯಲಾಗಿತ್ತು ಎಂದರೆ ಸರಿ. ಚೆನ್ನಪ್ಪನ ದತ್ತು ಮಗನಾಗ ಸುಬ್ಬಪ್ಪರವರಿಗೆ ಯಾವುದೆ ಆಸ್ತಿಯನ್ನ ಕೋಟ್ಟಿಲ್ಲ. ಸಾಕ್ಷಿ ಮುಂದುವರೆದು ರೂ.200 ಗಳನ್ನು ಪಡೆದುಕೊಂಡು ಸುಬ್ಬುಪ್ಪನಿಗೆ ಹಕ್ಕು ಕುಲಾಸೆ ಬರೆದುಕೊಟ್ಟಿದ್ದಾರೆ. ಸುಬ್ಬಮ್ಮ ತನ್ನ ದತ್ತು ಮಗ ಸುಬ್ಬಪ್ಪರವರಿಗೆ ಯಾವುದೆ ಆಸ್ತಿ ನೀಡಿಲ್ಲ.

ಚೆನ್ನಪ್ಪ ಮೃತನಾದ ನಂತರ ಆತನ ದತ್ತಕ ಮಗ ಸುಬ್ಬಪ್ಪನಿಗೆ ಯಾವುದೆ ಆಸ್ತಿ ವರ್ಗಾವಣೆಯಾಗಿಲ್ಲ ಎಂದರೆ ಸರಿ. ಸುಬ್ಬಪ್ಪರವರ ದತ್ತು ತಾಯಿ ಸುಬ್ಬಮ್ಮ ದಾವ ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದರು. ದಿಃ 06.01.1950 ರ ದಾವ ಸ್ವತ್ತನ್ನು ಸುಬ್ಬಮ್ಮ ಕ್ರಯಕ್ಕೆ ಪಡೆದಿದ್ದರು ಎಂದರೆ ಸರಿ. ಕ್ರಯಕ್ಕೆ ಪಡೆಯುವ ಕಾಲಕ್ಕೆ ದಾವ ಸ್ವತ್ತು ಲಾಟ್ ನಂ.1 ರಲ್ಲಿ ಪೂರ್ವಪಶ್ಚಿಮ-20½ಗಜ, ಉತ್ತರದಕ್ಷಿಣ-30 ಗಜ ಮತ್ತು ಲಾಟ್ ನಂ.2 ರಲ್ಲಿ ಪೂರ್ವಪಶ್ಚಿಮ-20½ ಗಜ, ಉತ್ತರದಕ್ಷಿಣ-16 ಗಜ ಎಂದು ನಮೂದು ಇತ್ತು ಎಂದರೆ ಸರಿ. ಮೇಲ್ಕಂಡ ಸ್ವತ್ತನ್ನು ಸುಬ್ಬಮ್ಮ ಕ್ರಯಕ್ಕೆ ಪಡೆದಿದ್ದರು ಎಂದರೆ ಸರಿ. ಲಾಟ್ ನಂ.2 ಮತ್ತು 8 ನ್ನು ಚೆನ್ನಪ್ಪ ಖರೀದಿ ಮಾಡಿದ್ದರು ಎಂದರೆ ಸರಿ. ದಕ್ಷಿಣಕ್ಕೆ ಲಗತ್ತಾಗಿರುವ ಲಾಟ್ ನಂ.8 ನ್ನು ಅಮೃತಮ್ಮನವರಿಗೆ ಮಾರಾಟ ಮಾಡಲಾಗಿದೆ ಎಂದರೆ ಸರಿ. ಕ್ರಯಕ್ಕೆ ಪಡೆದ ನಂತರ ಸುಬ್ಬಮ್ಮ ಸ್ವಾಧೀನದಲ್ಲಿ ಇದ್ದರು ಎಂದರೆ

ಸರಿ. ಸುಬ್ಬಮ್ಮ @ ಕೆಂಪಮ್ಮ ನನಗೆ 2 ಗುಂಟೆ ಜಮೀನನ್ನು 1980 ರಲ್ಲಿ ನೋಂದಾಯಿತ ದಾನ ಪತ್ರದ ಮೂಲಕ ಕೊಟ್ಟಿದ್ದಾರೆ ಎಂದು ತೋರಿಸಲು ಸದರಿ ದಾನ ಪತ್ರ ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ನನಗೆ ಬಿ.ಚೆನ್ನಪ್ಪ ಮತ್ತು ಬಸಮ್ಮ ದಾನ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ನನಗೆ ಸುಬ್ಬಮ್ಮ @ ಕೆಂಪಮ್ಮ ನನಗೆ ಯಾವುದೆ ದಾನ ಪತ್ರ ಬರೆದಿಲ್ಲ. ಲಾಟ್ ನಂ.1 ಮತ್ತು 2 ಕ್ಕೆ ಸಂಬಂಧಿಸಿದಂತೆ ಸುಬ್ಬಮ್ಮ @ ಕೆಂಪಮ್ಮ ಯಾವುದೆ ದಾನ ಪತ್ರ ಬರೆದಿಲ್ಲ. ಸಾಕ್ಷಿಗೆ ಒಂದು ದೃಢೀಕೃತ ಎಂ.ಆರ್ ನ್ನು ತೋರಿಸಿಲಾಗಿದ್ದು, ಅದನ್ನು ಒಪ್ಪಿಕೊಂಡ ಕಾರಣ ಅದನ್ನು ನಿಡಿ2 ಎಂದು ಗುರುತಿಸಲಾಯಿತು. ನಿಡಿ2 ರಲ್ಲಿ ಸದರಿ ಸ್ವತ್ತು ನಮಗೆ ದಾನವಾಗಿ ಬಂದಿದೆ ಎಂದು ನಮೂದು ಇಲ್ಲ ಎಂದರೆ ಸರಿ. 1984 ರಲ್ಲಿ ಚೆನ್ನಪ್ಪ ಮರಣ ಹೊಂದಿರುತ್ತಾರೆ. ಚೆನ್ನಪ್ಪ ನನಗೆ ದಾನ ಪತ್ರವನ್ನು ಬರೆದಿದ್ದರೆ ಆತ ಮೃತನಾದ ನಂತರ ಅದು ಅಸ್ತಿತ್ವಕ್ಕೆ ಬರುತ್ತಿತ್ತು ಎಂದರೆ ಸರಿಯಲ್ಲ. ದಾವ ಸ್ವತ್ತು ಮೂಲತಃ ಸುಬ್ಬಪ್ಪರವರ ದತ್ತು ತಾಯಿ ಸುಬ್ಬಮ್ಮ @ ಕೆಂಪಮ್ಮ ರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಆ ಕಾರಣ ದಾವ ಸ್ವತ್ತಿನ ಮೇಲೆ ಸುಬ್ಬಪ್ಪರವರ ಮಕ್ಕಳಾದ ಪ್ರತಿವಾದಿ 1 ಮತ್ತು 2 ರವರಿಗೆ ಮಾತ್ರ ಸಂಪೂರ್ಣ ಮಾಲಿಕತ್ವ ಇದೆ ಎಂದರೆ ಸರಿಯಲ್ಲ.

ಬಸಮ್ಮ ಚೆನ್ನಪ್ಪರವರ ಎರಡನೇ ಹೆಂಡತಿ ಮತ್ತು ವಾದಿ ಆಕೆಯ ಮಗಳು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಃ 296/1ಎ2 ಮತ್ತು 296/1ಎ3 ವಾದಿ ಹೆಸರಿಗೆ 2000 ನೇ ಇಸವಿಯಲ್ಲಿ ಆಗಿರಬಹುದು. ಸದರಿ ಖಾತೆ ಪೌತಿ ಮೇರೆಗೆ ಆಗಿದೆ. ಸರ್ವೇ ನಂಃ 296/1ಎ2 ರ ವಿಸ್ತೀರ್ಣ 2 ಗುಂಟೆ. ಸರ್ವೇ ನಂಃ 296/1ಎ3 ರ ವಿಸ್ತೀರ್ಣ 3 ಗುಂಟೆ. ಸರ್ವೇ ನಂಃ 296/1ಎ2 ರ ಚೆಕ್ಕುಬಂಧಿ ಪೂರ್ವಕ್ಕೆ-ಚಿಕ್ಕಮಲ್ಲಪ್ಪರವರ ಬಾಬ್ತು ಮನೆ, ಪಶ್ಚಿಮಕ್ಕೆ-ಕೆಂಪಮ್ಮರವರ ಬಾಬ್ತು ಖಾಲಿ ಜಾಗ, ಉತ್ತರಕ್ಕೆ-ಬೀದಿ ಮತ್ತು ದಕ್ಷಿಣಕ್ಕೆ-ನಾಗಪ್ಪರವರ ಮನೆ. ಸರ್ವೇ ನಂಃ 296/1ಎ3 ರ ಚೆಕ್ಕುಬಂಧಿ ಪೂರ್ವಕ್ಕೆ-ಗುರುಸ್ವಾಮಪ್ಪರವರ ಮನೆ, ಪಶ್ಚಿಮಕ್ಕೆ-ನನ್ನ ಹೆಸರಿನಲ್ಲಿರುವ ನಿವೇಶನ ಮತ್ತು ಕೆಂಪಮ್ಮರವರ ಬಾಬ್ತು ಜಾಗ, ಉತ್ತರಕ್ಕೆ-ಗುರುವಿನಪುರಕ್ಕೆ ಹೋಗುವ ರಸ್ತೆ ಮತ್ತು ದಕ್ಷಿಣಕ್ಕೆ-ಬೀದಿ.

ದಾವ ಸ್ವತ್ತಿನ ಮೇಲೆ ಚೆನ್ನಪ್ಪ, ಬಸಮ್ಮ ಮತ್ತು ವಾದಿಗಾಗಲಿ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಓ.ಎಸ್.291/2005 ರಲ್ಲಿ ಈ ದಾವೆಯ ಪರಿಹಾರವನ್ನು ಕೋರದ ಕಾರಣ ಈಗ ಈ ದಾವ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತಿಗೂ ನನ್ನ ಕುಟುಂಬಕ್ಕೂ ಯಾವುದೆ ಸಂಬಂಧ ಇಲ್ಲದಿದ್ದರು ಸುಳ್ಳು ದಾವೆ ಹೂಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ